# ಬಿಸಿಲು ಬೋಧಿ

ದುಃಖದ ಮೂಲ ಯಾವುದೆನ್ನುವುದನ್ನು ಹುಡುಕುತ್ತ ಸಿದ್ಧಾರ್ಥ ಅರಮನೆಯಿಂದ ಬಯಲಿಗೆ ಬಂದುದು ಇರುಳಿನಲ್ಲಿ. ಸಿದ್ಧಾರ್ಥನನ್ನು ಬುದ್ಧನನ್ನಾಗಿಸಿ, ಜ್ಞಾನದ ಕಣ್ಣನ್ನು ಅರಳಿಸಿದ್ದು ಬೆಳುದಿಂಗಳ ಕರುಣೆ. ಇದೇ ಬೆಳುದಿಂಗಳು ಪ್ರೇಮಿಗಳಿಗೆ ಸುಧೆ. ಕವಿಗಳ ಪಾಲಿಗೆ ಸ್ಫೂರ್ತಿ. 'ಬೆಳುದಿಂಗಳ ನೋಡ' ಎನ್ನುವುದು ಕವಿ ದ.ರಾ. ಬೇಂದ್ರೆ ಅವರ ಅಪೂರ್ವ ಹಾಡು. 'ಕಲಿ ಕಪ್ಪು ಎಲ್ಲಿನೂ ಇಲ್ಲ/ ಒಂದೆ ಸಮನೆಲ್ಲ/ ಎಲ್ಲನೂ ನುಣುಪ/ ಎಲ್ಲನೂ ನುಣುಪು/ ಇದು ಹಾಲುಗಡಲಿನ ಸೀಮಿ/ ಚಂದ್ರಮನೆ ಸ್ವಾಮಿ/ ಚಂದ್ರಮನೆ ಸ್ವಾಮಿ' ಎನ್ನುವ ಬಣ್ಣನೆಯು ಕಾವ್ಯರಸಿಕರೆದೆಗೆ ಬೆಳುದಿಂಗಳನೇ ಹನಿಸುವಂತಿದೆ. ಅಧ್ಯಾತ್ಮದ ಅನುಭಾವಕ್ಕೆ, ಸೌಂದರ್ಯದ ಅನುಭವಕ್ಕೆ, ಅರಿವಿನ ದರ್ಶನಕ್ಕೆ, ಪ್ರೇಮದ ಪರಿಭಾಷೆಗೆ ಬೆಳುದಿಂಗಳನು ನೋಡಬೇಕು.

ಬೆಳುದಿಂಗಳಿನ ಇನ್ನೊಂದು ತುದಿ ಬಿಸಿಲು. ಕಲಿ ಕಪ್ಪು ಒಂದೂ ಇಲ್ಲದ ಹಾಲಿನ ಕಡಲು ಒಂದಾದರೆ, ಇನ್ನೊಂದು ತದ್ವಿರುದ್ಧ ಸ್ಥಿತಿ. ಬೆಳುದಿಂಗಳಿನ ಸನ್ನಿಧಿಯಲ್ಲಿ ಮೈಮನಗಳು ಉಲ್ಲಸಿತಗೊಂಡರೆ, ಬಿಸಿಲ ಝಳದಲ್ಲಿ ಮೈಮನಸ್ಸು ಬಸವಳಿಯುತ್ತವೆ. ಬೆಳುದಿಂಗಳು ಬೋಧಿಸತ್ವದಂತೆ ಭಾಸವಾದರೆ, ಸತ್ವ ಬಸಿಯುವ ನಕಾರಾತ್ಮಕ ಶಕ್ತಿಯಂತೆ ಬಿಸಿಲು ಗೋಚರಿಸುತ್ತದೆ. ಹಾಗಾದರೆ, ಬಿಸಿಲಿಗೆ ಬೆಳುದಿಂಗಳ ಶಕ್ತಿ ಇಲ್ಲವೆ? ಧಗೆಯ ದಿನಗಳಲ್ಲಿ ಇಂಥ ಪ್ರಶ್ನೆಯೇ ಅಸಂಬದ್ಧವಾಗಿ ಕಾಣುವುದು ಅಸಹಜವೇನಲ್ಲ. ಜ್ಞಾನೋದಯಕ್ಕೆ ಪೂರಕವಾಗುವ ಬೆಳುದಿಂಗಳಿನ ಶಕ್ತಿ ಬಿಸಿಲಿಗಿರುವುದು ಸಾಧ್ಯವೆ? 'ಇಲ್ಲ' ಎನ್ನುತ್ತದೆ ಬಿಸಿಲಿಗೆ ಬಸವಳಿದ ಮನಸು. ಬಿಸಿಲೇನಿದ್ದರೂ ಇರುವ ಕಸುವ ಬಸಿಯುವುದು; ಮೈಮನಗಳ ತುಂಬ ದಣಿವು ತುಂಬುವುದು. ಬಿಸಿಲ ಝಳ ನಮ್ಮ ಏಕಾಗ್ರತೆಗೆ ಸವಾಲು ಒಡ್ಡುವುದು. ಚಿತ್ತ ಚಂಚಲಗೊಂಡಲ್ಲಿ ಅರಿವಿನ ಸೆಲೆ ಉಕ್ಕುವುದಾದರೂ ಎಲ್ಲಿ?

ಹಾಗಿದ್ದಲ್ಲಿ ಬೆಳುದಿಂಗಳಿನಂತೆ ಬೋಧಿಯಾಗುವ ಸಾಮರ್ಥ್ಯ, ಬುದ್ಧರನ್ನು ಸೃಜಿಸುವ ಜೀವಶಕ್ತಿ ಬಿಸಿಲಿಗಿಲ್ಲವೆ? ಇಲ್ಲವೆನ್ನುವುದು ಹೇಗೆ?

ಸಮಾಧಾನದಿಂದ ಗಮನಿಸಿ ನೋಡಿ. ಹೊಲದಲ್ಲಿ ದುಡಿಯುವ ರೈತ, ಮನೆ ಕಟ್ಟುವ ಕಾರ್ಮಿಕ ಬಿಸಿಲಿನಲ್ಲೂ ದುಡಿಯುತ್ತಾರೆ. ಅವರ ಬೆವರು ಮಣ್ಣಿನಲ್ಲಿ ಕರಗುತ್ತದೆ. ಆ ಬೆವರು ಅನ್ನಕ್ಕೆ ಮೂಲವಾಗುತ್ತದೆ. ಬೆಳುದಿಂಗಳು ಮೈಮನಗಳಿಗೆ ತಂಪು ನೀಡಬಲ್ಲದು. ಬಿಸಿಲಷ್ಟೇ ಅನ್ನ ಸೃಷ್ಟಿಸಬಲ್ಲದು. ಬಿಸಿಲಿಗೆ ಮುಖವೊಡ್ಡಿಯೂ ಗಿಡಮರಗಳು ಹಸುರು ಮುಕ್ಕಳಿಸುತ್ತವೆ. ರೈತನ ದುಡಿಮೆ, ಕಾರ್ಮಿಕನ ಶ್ರಮ, ಗಿಡಮರಗಳ ಹಸುರು – ಅಧ್ಯಾತ್ಮದ ಅನುಸಂಧಾನದ ಗಳಿಗೆಗಳಂತೆ ಕಾಣಿಸುವ ಈ ಎಲ್ಲ ಕ್ರಿಯೆಗಳು, ಅರಿವಿನ ಬೋಧೆಗೆ ತಾಯಿಕಾವಿನಂತೆ ಬಿಸಿಲು ಒದಗಿಬರುವ ನಿದರ್ಶನಗಳು. ಸುಡುಸತ್ಯಗಳ ಸಾಕ್ಷಾತ್ಕಾರಕ್ಕೆ ಬಿಸಿಲೇ ಕನ್ನಡಿ. ನೀರು ನಿರ್ಮಲವಾಗಿರಲೂ ಸೂರ್ಯಸ್ಪರ್ಶ ಅಗತ್ಯ. ತಂತ್ರಜ್ಞಾನ ಯುಗದಲ್ಲಿ ಬಿಸಿಲ ಕೊಯಿಲೆನ್ನುವುದು ಶಕ್ತಿಸಂಚಯ ಕ್ರಿಯೆ. ಕುವೆಂಪು ಅವರು ಹೇಳುವಂತೆ, 'ಸೂರ್ಯೋದಯ ಚಂದ್ರೋದಯ ದೇವರ ದಯೆ.' ಅವರದೇ ಕವಿತೆಯೊಂದರ ಸಾಲು: 'ಬಿಸಿಲಿದು ಬರಿ ಬಿಸಿಲಲ್ಲವೋ ಸೂರ್ಯನ ಕೃಪೆ ಕಾಣೋ'.

ಬೆಳುದಿಂಗಳಿನ ರಮ್ಯಗುಣ ಬಿಸಿಲಿಗಿಲ್ಲವಾದರೂ, ಬಿಸಿಲಿನ ಜೀವದ್ರವ್ಯ ಬೆಳುದಿಂಗಳಲ್ಲಿ ಕಡಿಮೆಯೇ. ಬಿಸಿಲನ್ನು ಹೊರತುಪಡಿಸಿದರೆ ಬೆಳುದಿಂಗಳಿಗೆ ತನ್ನದೇ ಆದ ಅಸ್ತಿತ್ವವಾದರೂ ಎಲ್ಲಿ? ಅದು ಪರಪುಟ್ಟ. ನಿಜದಿ, ಬಿಸಿಲು ಕಳಿತು ಹಣ್ಣಾಗಿರುವ ಸ್ಥಿತಿಯೇ ಬೆಳುದಿಂಗಳು. ಬಿಸಿಲು ಬೆವರಿ ಬೆವರಿ ಬಸವಳಿದು ಬೆಳುದಿಂಗಳಿನ ರೂಪ ತಾಳಿದೆ. ಈ ರೂಪಾಂತರವನ್ನು ಅರಿಯಲು ಮತ್ತೆ ಬೇಂದ್ರೆಯವರ ಮೊರೆ ಹೋಗಬೇಕು. 'ದವನದ ಹುಣ್ಣಿವೆಯ ಜಾತ್ರೆಯ ರಾತ್ರಿ' ಎನ್ನುವ ಅವರ ಕವಿತೆ, ಬಿಸಿಲು ಹಾಗೂ ಬೆಳುದಿಂಗಳಿನ ಕುರಿತ ನಮ್ಮ ಕಲ್ಪನೆಗಳನ್ನೇ ಬುಡಮೇಲು ಮಾಡುವಂತಿದೆ. 'ಬೆಳುದಿಂಗಳ ನೋಡ' ಎನ್ನುವ ಹಾಡು ಎಲ್ಲರಿಗೂ ಸೇರುತ್ತದಾದರೂ, ಆ ಬೆಳುದಿಂಗಳಿನ ಹಿಂದಿರುವ ಟಿಸಿಲು ಬಿಸಿಲೇ ಎನ್ನುವುದನ್ನು ಮರೆಯಬಾರದು ಎನ್ನುವ ಅರಿವನ್ನು ಕವಿತೆ ನೀಡುತ್ತದೆ. ಬಿಸಿಲು ಬೆಳುದಿಂಗಳಾಗಿ ಅರಳುವ ರೂಪಾಂತರದ ಚಿತ್ರ ಕವಿಹೃದಯಕೆ ಕಂಡಿರುವುದು ಹೀಗೆ: 'ಹಣ್ಣಾದ ಬಿಸಿಲ ಬಣ್ಣನ ಕಳತು ಬೆಳುದಿಂಗಳಾತೊ ಏನೋ.' ಬೆಳುದಿಂಗಳಲ್ಲಿ ಅದ್ದಿ ತೆಗೆದಂತಹ ಈ ಸಾಲಿನ ಕೊನೆಗೆ ಕವಿಯ ಉದ್ಗಾರ: 'ಹರದದ ಬಾನಜೇನೋ.' ಆಹಾ, ಬೆಳುದಿಂಗಳೇ ಪುಳಕಗೊಳ್ಳುವಂತಹ ಶಬ್ದಚಿತ್ರ. ಬಾನು ಹರಿಯುವುದೇನು, ಜೇನಾಗಿ ಸುರಿಯುವುದೇನು! ಬೇಂದ್ರೆಯವರೇನು ಬರಿಯ ಕವಿಯೇ; ಅವರು ವರಕವಿ; ಕಾವ್ಯರಸಿಕರಿಗೆ ಬೆಳುದಿಂಗಳನ್ನು ಕರುಣಿಸಿದವರು, ಸ್ವತಃ ಬೆಳುದಿಂಗಳಾದವರು. ಆದರೆ, ಹೀಗೆ ಬೆಳುದಿಂಗಳಾಗುವ ಮುನ್ನ ಅವರು ಪಟ್ಟ ಪಾಡು ಕಡಿಮೆಯದಲ್ಲ. 'ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೇ ನೀಡುವೆನು ರಸಿಕ ನಿನಗೆ' ಎನ್ನುವ ಬೇಂದ್ರೆ ತಾತ್ವಿಕತೆ ಎಲ್ಲ ಮಹಾತ್ಮರ ಬದುಕಿಗೂ ಸಂಬಂಧಿಸಿದ್ದು. ಬೆಂದೂ ಬೆಂದೂ ರೂಪುಗೊಂಡವರು ಬೇಂದ್ರೆ. ಬಿಸಿಲಿನ ಕಡಲಿನ ಮಂಥನದಲ್ಲಿ ಮೂಡಿದ ನವನೀತ ಅಂಬಿಕಾತನಯದತ್ತ ಎನುವ ಬೆಳುದಿಂಗಳು.

ಬೇಂದ್ರೆಯವರಷ್ಟೇ ಅಲ್ಲ, ಸಮಾಜಕ್ಕೆ ಬೆಳುದಿಂಗಳಾಗಿ ಪರಿಣಮಿಸಿದ ಎಲ್ಲ ಮಹಾತ್ಮರೂ ಬಿಸಿಲಿನ ಹಾದಿಯ ಪಥಿಕರೇ. ಸಿದ್ಧಾರ್ಥ ಬುದ್ಧನಾದುದು, ಮೋಹನ ಮಹಾತ್ಮನಾದುದು ಬಿಸಿಲಿಗೆ ತಮ್ಮನ್ನೊಪ್ಪಿಸಿಕೊಂಡ ನಂತರವೇ. ಜೀವನದ ಸಾರ್ಥಕತೆ ಇರುವುದು ವ್ಯಕ್ತಿ ಬೆಳುದಿಂಗಳಾಗಿ ರೂಪಾಂತರ ಹೊಂದುವುದರಲ್ಲಿ. ಆದರೆ, ಈ ಬೆಳುದಿಂಗಳ ಪಯಣ ಸುಲಭವಾದುದಲ್ಲ. ಬಿಸಿಲ ಮೂಸೆಯಲ್ಲಿ ನಮ್ಮನ್ನು ನಾವು ಸುಟ್ಟುಕೊಳ್ಳದೆ, ಸೋಸಿಕೊಳ್ಳದೆ, ಅಪರಂಜಿತನ ದಕ್ಕುವುದಿಲ್ಲ.

ಬೆಳುದಿಂಗಳಾಗುವುದೆಂದರೆ ಬಿಸಿಲಿನ ಹಂಗು ಕಳೆದುಕೊಳ್ಳುವುದು ಎಂದರ್ಥವಲ್ಲ; ಬಿಸಿಲ ಬಗೆಗಿನ ಪೂರ್ವಗ್ರಹಗಳನ್ನು ಕಳೆದುಕೊಳ್ಳುವುದು. ಕಾವು ಮತ್ತು ಬೆಳಕಿನ ಬಿಸಿಲು ಅಂತರಂಗದೊಳಗೆ ನಿರಂತರ. ಒಳಗೆ ನಿಗಿನಿಗಿ ಬಿಸಿಲು ಇದ್ದಾಗಷ್ಟೇ ಹೊರಗೆ ಬೆಳುದಿಂಗಳು.

■ **ಚಂಪಕಮಾಲಾ**

## ಮಾತೇ ಮುತ್ತು

- ನೀತಿಯ ನೆಲೆಗಟ್ಟಿಲ್ಲದ ವಾದವು ಮಾತಿನ ವ್ಯಭಿಚಾರ.
  —ಎಸ್.ಎಲ್. ಭೈರಪ್ಪ
- ಮಾತು ಮನಸ್ಸುಗಳನ್ನು ಒಂದುಗೂಡಿಸಬೇಕೇ ಹೊರತು ಒಡೆಯಬಾರದು
  —ಮಾಸ್ತಿ
- ಕನ್ನಡಿಗರು ವಿನಯಕ್ಕಾಗಿ ಬಗ್ಗಿ ನಡೆಯಬಹುದು, ಆದರೆ ರಿಕ್ತರಂತೆ ಕುಗ್ಗಿ ನಡೆಯಬೇಕಾಗಿಲ್ಲ.
  —ಕುವೆಂಪು
- ದುಡಿಮೆಯಲ್ಲಿ ಸೇವಾ ಬುದ್ಧಿಯಿರಲಿ.
  —ಸರ್ ಎಂ. ವಿಶ್ವೇಶ್ವರಯ್ಯ
- ಮತ್ತೊಬ್ಬರ ವಿಚಾರವನ್ನು ಕೇಳುವ ಸಹನೆಯನ್ನು ಬೆಳೆಸಿಕೊಳ್ಳದಿದ್ದರೆ ನಾವು ವಿಚಾರವಂತರಾಗುವುದು ಸಾಧ್ಯವಿಲ್ಲ.
  —ಹಾ.ಮಾ. ನಾಯಕ
- ನಮಗೆ ಅಗತ್ಯ ಇದ್ದಷ್ಟು ಮಾತ್ರ ತಿಳಿದುಕೊಂಡು, ಮಿಕ್ಕಿದ್ದನ್ನು ನೋಡಿ ಅಚ್ಚರಿಪಡುತ್ತಾ ಇದ್ದುಬಿಡುವುದು ಒಳ್ಳೆಯದು.
  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ
- ಅದೃಷ್ಟವಂತ ಎಂದರೆ ಅವಕಾಶವನ್ನು ಪಡೆಯುವವನು, ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು.
  —ಸ್ವಾಮಿ ವಿವೇಕಾನಂದ
- ಬದುಕಿನ ಗದ್ದಲ ಹೆಚ್ಚಾಗಿದ್ದಾಗ ಬಹಳ ಜನರಿಗೆ ಸಾವಿನ ಸವಾಲು ಕೇಳಿಸುವುದಿಲ್ಲ.
  —ಗೋಪಾಲಕೃಷ್ಣ ಅಡಿಗ